## ಧಾರಾವಾಹಿ ವಿಚಾರಪರ ಇರಲಿ

ಬಹುತೇಕ ಧಾರಾವಾಹಿಗಳು ಮೂಢನಂಬಿಕೆಗಳನ್ನು ಪೋಷಿಸುತ್ತಿವೆ. ಕಲರ್ಸ್ ಕನ್ನಡದ 'ಗಿಣಿರಾಮ' ಕೂಡ ಈ ಸಾಲಿಗೆ ಸೇರುತ್ತಿರುವುದು ಬೇಸರದ ವಿಷಯ. ಋಷಿಕೇಶಕ್ಕೆ ನಾಯಕ ನಾಯಕಿಯರನ್ನು ಕಳಿಸುತ್ತಾರೆ. ದುರ್ಗಮ ಬೆಟ್ಟಗುಡ್ಡ ಅಲೆದಾಡಿಸಿ ವಿಚಿತ್ರ ಸನ್ನಿವೇಶವನ್ನು ಸೃಷ್ಟಿಸುತ್ತಾರೆ. ಅರ್ಥವಿಲ್ಲದ ಘಟನೆಗಳು ವಾಸ್ತವತೆಗೆ ದೂರವಾಗಿರುತ್ತವೆ.

'ನನ್ನರಸಿ ರಾಧೆ'ಯಲ್ಲಿ ಬರೀ ಅವೈಜ್ಞಾನಿಕ ವಿಚಾರಗಳೇ ತುಂಬಿವೆ. ನಾಯಕನ ನೆನಪಿಗೆ ನಾಯಕಿ ಬಿಕ್ಕಳಿಸುವುದು. ರುದ್ರಾಕ್ಷಿ ಇಟ್ಟುಕೊಳ್ಳುವುದರಿಂದ ಅಪರಿಮಿತ ಶಕ್ತಿ ಬರುತ್ತದೆ. ಇಂಚರಳಿಗೆ ಪ್ರಜ್ಞೆಯಿಲ್ಲದಿದ್ದರೂ ಸುತ್ತಲೂ ನಡೆಯುವ ಎಲ್ಲಾ ಸಂಗತಿಗಳು ತಿಳಿಯುತ್ತವೆ. ಇಂತಹ ಅವಾಸ್ತವ ಸಂಗತಿಗಳು ವಿಚಾರಪರತೆಗೆ ವಿರುದ್ಧವಾಗಿವೆ. ಇದ್ದುದರಲ್ಲಿ 'ಕನ್ನಡತಿ' ಮತ್ತು 'ಲಕ್ಷಣ' ಚೆನ್ನಾಗಿವೆ ಎಂದು ಹೇಳಬಹುದು.

—ಟಿ.ಪಿ. ಭೀಮಾರೆಡ್ಡಿ, ದಾವಣಗೆರೆ

## ಗೀತಾ ಆಯುಷ್ಯ ಎಷ್ಟು ದಿನ?

ಕಲರ್ಸ್ ಕನ್ನಡದಲ್ಲಿ ಹೊಸ ಧಾರಾವಾಹಿಗಳ ಮಹಾಪೂರ ಪ್ರಾರಂಭವಾಗಿದೆ. 'ಲಕ್ಷಣ' ಮತ್ತು 'ಕನ್ಯಾಕುಮಾರಿ' ಸುಮ್ಮನೆ ಸುತ್ತ ಬೇಕು ಎಂದು ಮಾಡಿದಂತೆ ಇದೆ. ಕಥೆಗೆ ತರ್ಕ ಇದ್ದಂತಿಲ್ಲ. 'ದಾಸ ಪುರಂದರ' ಇನ್ನೂ ಹೊಸದು. ಅದರ ಬಗ್ಗೆ ಈಗಲೇ ಏನೂ ಹೇಳುವಂತಿಲ್ಲ. 'ಮಂಗಳ ಗೌರಿ ಮದುವೆ', 'ಗೀತಾ' ಆಯುಷ್ಯ ಇನ್ನೂ ಎಷ್ಟು ವರ್ಷಗಳೋ ಗೊತ್ತಿಲ್ಲ.

—ಗಾಯತ್ರಿ

## ಸಂಪ್ರದಾಯ ಹೇರಬೇಡಿ

ಕನ್ನಡದ ಬಹುತೇಕ ಧಾರಾವಾಹಿಗಳಲ್ಲಿ ವೈದಿಕ ಸಂಪ್ರದಾಯದ ಆಚರಣೆಗಳನ್ನು ವೈಭವೀಕರಿಸುತ್ತಾರೆ. ಆದರೆ ನಮ್ಮ ಕರ್ನಾಟಕದಲ್ಲಿ ವೈದಿಕೇತರ ಸಂಪ್ರದಾಯವೇ ಹೆಚ್ಚಿದೆ. ಕಲಾ ಜಗತ್ತಿನಲ್ಲಿ ಸಮಾನತೆಯ ವಿಷಯ ನಿರಂತರ ಚರ್ಚೆಗೆ ಬರುತ್ತದೆ. ಹೀಗಿರುವಾಗ ಇದನ್ನು ಕಂಡೂ ಕಾಣದಂತೆ ಟೀವಿಯಲ್ಲಿ ಕಥೆ ನಿರೂಪಿತವಾಗುತ್ತಿದೆ. ಬೇರೆ ಸಂಪ್ರದಾಯಗಳ ಮೇಲೆ ವೈದಿಕ ಸಂಪ್ರದಾಯದ ಹೇರಿಕೆ ಆದಂತೆ ಆಗುತ್ತದೆ.

—ಜಗದೀಶ ಬಿ. ಹೊಸೂರು, ಮೈಸೂರು

ವಾರದ ಪತ್ರ

## ಇಂಗ್ಲಿಷ್ ಸಿನಿಮಾಗಳ ಯುದ್ಧ ವೈಭವ

ರಷ್ಯಾ–ಉಕ್ರೇನ್ ಯುದ್ಧ! ಸುದ್ದಿ ವಾಹಿನಿಗಳು ದಿನ ಪೂರ್ತಿ ಯುದ್ಧಕ್ಕೆ ಸಂಬಂಧಪಟ್ಟ ವರದಿ ಪ್ರಸಾರ ಮಾಡುತ್ತಿರುವ ವೈಖರಿ ನಿಜಕ್ಕೂ ಅತಿರೇಕದ ಪರಮಾವಧಿ. ಭಯಾನಕ ದೃಶ್ಯಗಳನ್ನು ರಂಜನೀಯವಾಗಿ ತಮ್ಮದೇ ಆದ ರೀತಿಯಲ್ಲಿ ಬಿಂಬಿಸುತ್ತಿವೆ. ಪ್ರಸಿದ್ಧ ಇಂಗ್ಲಿಷ್ ಸಿನಿಮಾಗಳ ಯುದ್ಧದ ದೃಶ್ಯಗಳನ್ನು ಅನಾಮತ್ತಾಗಿ ಎತ್ತಿಕೊಂಡು ಪ್ರಸಾರ ಮಾಡುತ್ತಿವೆ.

ಅಲ್ಲೆಲ್ಲೋ ಒಂದು ಬಾಂಬ್ ದಾಳಿ ಆಗಿದ್ರೆ, ಅದೇ ದೃಶ್ಯವನ್ನು ಒಂದು ದಿನದಲ್ಲಿ ಕನಿಷ್ಠ 50 ಬಾರಿ ಪ್ರಸಾರಮಾಡಿ ಅಸಹ್ಯ ಹುಟ್ಟಿಸುತ್ತದೆ. ಯುದ್ಧ ಸಂಬಂಧಿ ಹಾಗೂ ಜಾಗತಿಕ ವಿಷಯ ವಸ್ತುಗಳನ್ನು ಪ್ರಸಾರ ಮಾಡುವಾಗ ಕನಿಷ್ಠ ಪಕ್ಷ ಸಾಮಾಜಿಕ ಬದ್ಧತೆ ಬೇಡವೇ?

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಶಂಕರ್ ಅಶ್ವತ್ಥ್‌ಗೆ ಮರುಜೀವ



ಕೆಲ ನಟರಲ್ಲಿ ಪ್ರತಿಭೆ ಇದ್ದರೂ ಅದಾವ ಕಾರಣಕ್ಕೋ ಮೂಲೆಗುಂಪಾಗುತ್ತಾರೆ. ಶಂಕರ್ ಅಶ್ವತ್ಥ್ ಆ ಗುಂಪಿಗೆ ಸೇರಿದ ಕಲಾವಿದರು. ನಟನೆಗೆ ಅವಕಾಶ ಸಿಗದೆ, ಕ್ಯಾಬ್ ನಡೆಸಿ ಜೀವನ ಸಾಗಿಸುತ್ತಿದ್ದರು. ಹಲವು ವರ್ಷಗಳ ಅಜ್ಞಾತವಾಸದ ನಂತರ 'ರಾಮಾಚಾರಿ'ಯಲ್ಲಿ ಅವರಿಗೊಂದು ಸೂಕ್ತ ಪಾತ್ರ ದೊರಕಿದೆ.

ತಮಗೆ ದೊರೆತ ಪಾತ್ರದಲ್ಲಿ ಅವರು ಪ್ರಬುದ್ಧವಾಗಿ ಅಭಿನಯಿಸುತ್ತಿದ್ದಾರೆ. ತಂದೆಗೆ ತಕ್ಕ ಮಗ ಎಂಬುದನ್ನು ಅಭಿನಯದಿಂದ ಸಾಬೀತುಪಡಿಸುತ್ತಿದ್ದಾರೆ. 'ರಾಮಾಚಾರಿ' ಆರಂಭವಾದ ಹೊಸದರಲ್ಲಿ ಒಂದು ಕ್ಷಣ ಬೆಚ್ಚಿಬಿದ್ದೆ. ಏಕೆಂದರೆ ತುಂಬ ದಿನ ಅಭಿನಯದಿಂದ ದೂರ ಇದ್ದರು. ಅವರ ಚಹರೆ ಮನಃಪಟಲದಿಂದ ಕಣ್ಮರೆಯಾಗಿತ್ತು. ಅವರಿಗೆ ಹೀಗೇ ಅವಕಾಶಗಳು ದೊರೆಯುತ್ತಿರಲಿ.

—ಮುರಲೀಧರ ಕುಲಕರ್ಣಿ, ಬೀದರ್

## ನೈಜತೆ ಮರೆತ 'ಜೊತೆ ಜೊತೆಯಲಿ'

ಝೀ ಕನ್ನಡದ 'ಜೊತೆ ಜೊತೆಯಲಿ' ಆರ್ಯವರ್ಧನ್, ಜಲಂಧರ್‌ನನ್ನು ಗುಂಡಿಟ್ಟು ಹತ್ಯೆ ಮಾಡುತ್ತಾನೆ. ಕೊಂದ ಆತ ಏನೂ ಆಗಿಲ್ಲ ಎಂಬಂತೆ ಆರಾಮವಾಗಿ ಕಾರಿನಲ್ಲಿ ಹೊರಡುತ್ತಾನೆ. ತನ್ನ ಸಹಾಯಕರಿಗೆ ಜಾಗವನ್ನು ಸ್ವಚ್ಛ ಮಾಡುವಂತೆ ಹೇಳುತ್ತಾನೆ. ಕೊಲೆ ಆದರೆ ಕಾನೂನು, ಪೊಲೀಸ್ ಹಿಡಿತವೂ ಇಲ್ಲವಾ? ಧಾರಾವಾಹಿ ನೈಜತೆಗೆ ಹತ್ತಿರವಾಗಿರಲಿ.

—ವಸಂತಿ ಪಾರಂಪಳ್ಳಿ, ಬೆಂಗಳೂರು

## ಉಕ್ರೇನ್-ರಷ್ಯಾ ಯುದ್ಧ: ಸುದ್ದಿ ಸುಗ್ಗಿ

ಉಕ್ರೇನ್–ರಷ್ಯಾ ಯುದ್ಧ ಸುದ್ದಿ ವಾಹಿನಿಗಳಿಗೆ ಸುಗ್ಗಿಯ ಹಬ್ಬವಾಗಿದೆ. ಯುದ್ಧ ಆರಂಭವಾದಾಗಿನಿಂದ ಟೀವಿ ಪರದೆಯ ಮೇಲೆ ರಣರಂಗ ಮಾತ್ರ ಕಾಣುತ್ತಿದೆ. ಇದು ವಿನಾಶಕಾರಿ ಘಟನೆ. ಇದರಿಂದ ಜಗತ್ತೇ ತಲ್ಲಣಗೊಂಡಿದೆ. ಅದರ ಪರಿಣಾಮ ವಿಶ್ವವ್ಯಾಪಿಯಾಗಿದೆ. ದೇಶ ಮತ್ತು ರಾಜ್ಯದ ಸುದ್ದಿಗಳಿಗಿಂತ ಹೆಚ್ಚು ಯುದ್ಧ ಸುದ್ದಿ ಮಾಡುತ್ತಿರುವುದು ವಿಷಾದದ ಸಂಗತಿ. ಯಾವ ಘಟನೆಗೆ ಎಷ್ಟು ಮಹತ್ವ ನೀಡಬೇಕು ಎಂದು ವಿವೇಕದಿಂದ ಯೋಚಿಸಬೇಕು ಎಂದು ಅನಿಸುತ್ತದೆ.

—ರಮಾನಂದ ಶರ್ಮಾ, ಬೆಂಗಳೂರು

## ಎಳೆತಕ್ಕೆ ವೀಕ್ಷಕರ ಉಪಾಯ!

ಧಾರಾವಾಹಿಗಳಲ್ಲಿ ಹಿಂದಿನ ದಿನದ ಕೊನೆ ಅರ್ಧದ ದೃಶ್ಯಗಳನ್ನೇ ಮರುದಿನದ ಆರಂಭದಲ್ಲಿ ಪ್ರಸಾರಮಾಡುತ್ತವೆ. ಆದರೂ ಆಸಕ್ತಿ ತಾಳದೆ ದಿನಾ ನೋಡುತ್ತಾರೆ. ಇದರಿಂದ ಬೇಸತ್ತು, ನಮ್ಮ ಮನೆಯಲ್ಲಿ ನಾವು ಈಗ ದಿನ ಬಿಟ್ಟು ದಿನ ಮಾತ್ರ ಧಾರಾವಾಹಿಗಳನ್ನು ವೀಕ್ಷಿಸುತ್ತಿದ್ದೇವೆ. ಅಷ್ಟರಿಂದಲೇ ನಮಗೆ ಧಾರಾವಾಹಿಯ ಓಘ ತುಂಡಾಗದೆ ಸಂಪೂರ್ಣ ಕಥೆ ತಿಳಿದು ಬಿಡುತ್ತದೆ. ಟೀವಿಗಾಗಿ ವ್ಯಯಿಸುವ ಶೇ 50ರಷ್ಟು ವಿದ್ಯುತ್ ಉಳಿತಾಯವೂ ಆಗುತ್ತದೆ.

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

## ಕೆಡುಕಿನ ಕಥೆ

ಕಲರ್ಸ್ 'ಕನ್ನಡತಿ', 'ಗೀತಾ', 'ಮಂಗಳ ಗೌರಿ', 'ನನ್ನರಸಿ ರಾಧೆ' ಧಾರಾವಾಹಿಗಳಲ್ಲಿ ವಿಕೃತ ಭಾವನೆ ತುಂಬಾ ಅತಿರೇಕಕ್ಕೆ ಹೋಗಿದೆ. ಯಾವುದಕ್ಕೂ ಒಂದು ಮಿತಿ ಇರಲಿ. ಸುತ್ತಿ ಬಳಸಿ ಸಂಬಂಧವಿಲ್ಲದ ಪಾತ್ರಗಳನ್ನು ತುರುಕಿ ಕಥೆಯ ದಿಕ್ಕನ್ನು ಬದಲಿಸುವ ಪ್ರಯತ್ನ ಬಿಡಬೇಕು.

ಹೆಂಗಸರ ಮನೋಭಾವವನ್ನು ವಿಚಿತ್ರವಾಗಿ ಚಿತ್ರಿಸುವುದು ಸರಿಯಲ್ಲ. ಉದಾಹರಣೆಗೆ, ಮೊದಲು ಕನ್ನಡತಿಯಲ್ಲಿ ಸಾನಿಯಾ ತಾಯಿ, ಮಗಳಿಗೆ ಕೆಟ್ಟದ್ದನ್ನು ಮಾಡಲು ಪ್ರಚೋದಿಸುವ ಮಾತು ಆಡುತ್ತಿರಲಿಲ್ಲ. ಈಗ ಅವರೇ ಮಗಳಿಗೆ ಕೆಡುಕಿನ ದಾರಿ ತೋರಿಸುತ್ತಿದ್ದಾರೆ. ಇದರಿಂದ ನೋಡುಗರಲ್ಲಿ ತಾಯಿಯ ಬಗ್ಗೆ ಒಳ್ಳೆ ಅಭಿಪ್ರಾಯ ಮುಕ್ಕಾಗುತ್ತದೆ. ಯಾವಾಗಲೂ ತಾಯಿ–ತಂದೆ ಮಕ್ಕಳಿಗೆ ಒಳ್ಳೆಯದನ್ನೇ ಮಾಡುತ್ತಾರೆ.

—ರಾಮಚಂದ್ರ ನಾಡಿಗ್